# ಸ್ವಾಮಿ ವಿವೇಕಾನಂದರ 150ನೇ ಜಯಂತಿ ಮಹೋತ್ಸವ – (2011–2014)

## 'ವಿವೇಕಪ್ರಭ' ಪತ್ರಿಕೆಯ ವತಿಯಿಂದ

# ವಿವೇಕಸೌರಭ – 2012

## (ವಿಶೇಷ ಆವಾಸೀ ಆಧ್ಯಾತ್ಮಿಕ ಶಿಬಿರ)

**28.9.2012 ರಿಂದ 30.09.2012 ; ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಮೈಸೂರು**

ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಮತ್ತು ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳು ಆಧುನಿಕ ಯುಗದ ಆಧ್ಯಾತ್ಮಿಕ ಜ್ಯೋತಿಗಳಾಗಿವೆ; ಈಗಿನ ಕಾಲದ ಯಾಂತ್ರಿಕ ಜೀವನಕ್ಕೆ ಜೀವಸಂಜೀವಿನಿಗಳಾಗಿವೆ. ಕಷ್ಟಕಾರ್ಪಣ್ಯಗಳಿಂದ ನೊಂದ ಮನಸ್ಸಿಗೆ ಸಾಂತ್ವನವನ್ನೂ, ಧೈರ್ಯವನ್ನೂ, ಆತ್ಮವಿಶ್ವಾಸವನ್ನೂ ನೀಡುವ ಈ ಉದಾತ್ತ ಚಿಂತನೆಗಳನ್ನು ಭಕ್ತರು ಒಟ್ಟಾರೆ ಸೇರಿ ಮನನ ಮಾಡುವ ಆವಶ್ಯಕತೆ ಇದೆ. ಆ ಸುಸಂದರ್ಭ ಈಗ ಒದಗಿಬಂದಿದ್ದು, ಈ ಉದ್ದೇಶಕ್ಕಾಗಿಯೇ ವಿವೇಕಪ್ರಭ ಪತ್ರಿಕೆಯ ವತಿಯಿಂದ, ಸ್ವಾಮಿ ವಿವೇಕಾನಂದರ 150ನೇ ಜನ್ಮಜಯಂತಿ ಮಹೋತ್ಸವದ ಅಂಗವಾಗಿ **'ವಿವೇಕ ಸೌರಭ – 2012'** ಅನ್ನು ಆಯೋಜಿಸಲಾಗಿದೆ.



ಮೂರು ದಿನಗಳ ಈ ಸಮಾವೇಶದಲ್ಲಿ **ದಿವ್ಯತ್ರಯರ, ಅದರಲ್ಲೂ ಸ್ವಾಮಿ ವಿವೇಕಾನಂದರ ಜೀವನ-ಸಂದೇಶಗಳ ಆಲೋಚನೆ, ಶಾಸ್ತ್ರಗಳ ಬಗ್ಗೆ ತಿಳಿವಳಿಕೆ, ಧ್ಯಾನದ ಆಚರಣೆಯ ಬಗ್ಗೆ ಅರಿವು, ದೈನಂದಿನ ಜೀವನದಲ್ಲಿ ಅಧ್ಯಾತ್ಮವನ್ನು ಅಳವಡಿಸಿಕೊಳ್ಳುವುದು ಹೇಗೆ?** – ಈ ವಿಷಯಗಳ ಬಗ್ಗೆ ರಾಮಕೃಷ್ಣ ಮಹಾಸಂಘದ ಹಿರಿಯ ಯತಿಗಳು ಮಾರ್ಗದರ್ಶನ ಮಾಡುವರು. ಹಾಗೆಯೇ ನಾಡಿನ ಸುಪ್ರಸಿದ್ಧ ಭಾಷಣಕಾರರಿಂದ ಉದ್ಬೋಧಕ ಪ್ರವಚನಗಳು, ಯಕ್ಷಗಾನ, ಅಧ್ಯಾತ್ಮ ಪ್ರವಚನ-ಗಾನಸುಧೆ – ಇವೂ ಆಯೋಜಿತವಾಗಿವೆ. ಅದಲ್ಲದೆ ಪ್ರಸಿದ್ಧ ಗಾಯಕರಿಂದ ದೈನಂದಿನ ಭಜನೆಯ ಜೊತೆಗೆ, ಭಾಷಣಗಳ ಮಧ್ಯೆ 'ನಾಮಸಂಕೀರ್ತನೆ' ಕಾರ್ಯಕ್ರಮವೂ ಇರುತ್ತದೆ. ಈ ಸಮಾವೇಶದಲ್ಲಿ ರಾಮಕೃಷ್ಣ ಮಹಾಸಂಘವು ಕರ್ನಾಟಕದಲ್ಲಿ ಹೊರತರುತ್ತಿರುವ ಏಕೈಕ ಪತ್ರಿಕೆಯಾದ 'ವಿವೇಕಪ್ರಭ'ದ ಪ್ರಚಾರದ ಬಗ್ಗೆಯೂ ಸಮಾಲೋಚನೆ ನಡೆಯುವುದು.

ನಂಜರಾಜ ಬಹದ್ದೂರ್ ಛತ್ರವು ಊರಿನ ಮಧ್ಯ ಭಾಗದಲ್ಲಿದ್ದು, ಅಲ್ಲಿಯೇ ಸಮಾರಂಭದ ಮತ್ತು ಊಟ ವಸತಿಗಳ ಏರ್ಪಾಡು ಇರುತ್ತದೆ. ವಿಶಾಲವಾದ ಸ್ಥಳ, ವಸತಿ ವ್ಯವಸ್ಥೆಯನ್ನು ಈ ಛತ್ರ ಹೊಂದಿದೆ. 800–1000 ಜನರಿಗೆ ಇಲ್ಲಿ ಊಟವಸತಿಗಳ ಸೌಕರ್ಯ ಮಾಡಬಹುದಾಗಿದೆ.

1. **ಕಾಣಿಕೆ : ವಸತಿ ಸಹಿತ : ರೂ.600/– ಮಾತ್ರ ; ವಸತಿ ರಹಿತ : ರೂ.450/– ಮಾತ್ರ.**
2. **ಶಿಬಿರಾರ್ಥಿಗಳು 28.09.2012 (ಶುಕ್ರವಾರ) ಮಧ್ಯಾಹ್ನ ಒಂದು ಗಂಟೆಯ ಒಳಗೆ ಛತ್ರಕ್ಕೆ ಬರಬೇಕು ಮತ್ತು 30.09.2012 ರಂದು (ಭಾನುವಾರ) ಮಧ್ಯಾಹ್ನ 3.30 ರ ನಂತರ ತೆರಳಬಹುದು. ವಸತಿ ರಹಿತ ಅಭ್ಯರ್ಥಿಗಳು ಪ್ರತಿನಿತ್ಯ ಕಾರ್ಯಕ್ರಮಕ್ಕೆ ಬಂದು ತದನಂತರ ಮನೆಗೆ ತೆರಳಬಹುದು.**
3. **ಆಸಕ್ತರು, ಭಾಗವಹಿಸುವ ಪ್ರತಿ ವ್ಯಕ್ತಿಗೆ ರೂ.600/– ಅನ್ನು ಡಿ.ಡಿ. ಕಳುಹಿಸಿ ನೋಂದಾಯಿಸಿಕೊಳ್ಳಬಹುದು. ಅವರಿಗೆ 10 ರಸೀದಿಗಳು ಇರುವ ಒಂದು ರಸೀದಿಪುಸ್ತಕವನ್ನು ಕಳಿಸಲಾಗುವುದು. ಅವರು ಸಾಧ್ಯವಾದಷ್ಟು ವಿವೇಕಪ್ರಭ ಚಂದಾ ಮಾಡಿಸಲು ಪ್ರಯತ್ನಿಸಬೇಕು ಮತ್ತು ಸಮಾವೇಶಕ್ಕೆ ಬರುವಾಗ ಅದನ್ನು ಜಮಾಮಾಡಬೇಕು. ಸೆಪ್ಟೆಂಬರ್ 15ರ ನಂತರ ನಿರ್ದೇಶನಗಳುಳ್ಳ ಸೂಚನಾಪತ್ರವನ್ನು ಅಂಚೆಯ ಮೂಲಕ ಕಳಿಸಲಾಗುವುದು. 'ವಿವೇಕಪ್ರಭ' ಚಂದಾ ಮಾಡಿಸುವುದನ್ನು ಈ ಸಮಾವೇಶಕ್ಕೆ ಆದ್ಯತೆಯೆಂದು ಪರಿಗಣಿಸಲಾಗುವುದೇ ಹೊರತು ಇದು ನಿರ್ಬಂಧವಲ್ಲ.**
4. **ಒಟ್ಟು ಕೇವಲ 800 ಶಿಬಿರಾರ್ಥಿಗಳಿಗೆ ಮಾತ್ರ ಅವಕಾಶವಿರುವುದರಿಂದ ಒಡನೆಯೇ ಹಣ ಕಳುಹಿಸಿ, ನೋಂದಾಯಿಸಿಕೊಳ್ಳಿ.**
5. **ಹಣವನ್ನು ಕೇವಲ ಡಿ.ಡಿ. ಮೂಲಕ 'Sri Ramakrishna Ashrama, Viveka Prabha A/c' ಹೆಸರಿಗೆ ಕಳಿಸಬೇಕು. ಲಕೋಟೆಯ ಮೇಲೆ "ವಿವೇಕಪ್ರಭ ಭಕ್ತ ಸಮಾವೇಶ – 2012' ಎಂದು ನಮೂದಿಸಿರಬೇಕು. ಪತ್ರದಲ್ಲಿ ಹೆಸರು, ವಿಳಾಸ, ಮೊಬೈಲ್ ನಂಬರ್, ಇ-ಮೈಲ್ ವಿಳಾಸ, ವಯಸ್ಸುಗಳನ್ನು ನಮೂದಿಸಬೇಕು. ಒಂದೇ ಪತ್ರದಲ್ಲಿ ಎಷ್ಟು ಜನರನ್ನು ಬೇಕಾದರೂ ನಮೂದಿಸಬಹುದು ಹಾಗೂ ಒಟ್ಟು ಹಣವನ್ನು ಒಂದೇ ಡಿ.ಡಿ.ಯ ಮೂಲಕ ಕಳಿಸಬಹುದು.**
6. **ಹೋಟೆಲ್ ಕೊಠಡಿ ವ್ಯವಸ್ಥೆ ಇಚ್ಛಿಸುವವರು ಬರೆದು ತಿಳಿಸಿದರೆ, ಅವರಿಗೆ ಮಾಹಿತಿ ಪತ್ರ ಕಳಿಸಲಾಗುವುದು.**
7. **ದೀರ್ಘಕಾಲದ ಕಾಯಿಲೆಗಳಿಂದ ನರಳುತ್ತಿರುವವರು ಭಾಗವಹಿಸದಿರುವುದು ಒಳ್ಳೆಯದು.**
8. **ಡಿ.ಡಿ. ಮತ್ತು ಪತ್ರವನ್ನು ಕಳಿಸಬೇಕಾದ ವಿಳಾಸ :**
   **'ವಿವೇಕಪ್ರಭ ಭಕ್ತ ಸಮಾವೇಶ – 2012'**
   **ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ,**
   **ಮೈಸೂರು – 570 020**

ಸಂಪಾದಕೀಯ



# ವೇದಾಂತದ ಅನುಷ್ಠಾನ ಮಾನವತೆಗೊಂದು ವರದಾನ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸ್ವಾಮಿ ವಿವೇಕಾನಂದರು 'ಅನುಷ್ಠಾನ ವೇದಾಂತ'ದ ಬಗೆಗಿನ ತಮ್ಮ ಮೂರನೆಯ ಪ್ರವಚನವನ್ನು ೧೮೯೬ರ ನವೆಂಬರ್ ೧೭ ರಂದು ಲಂಡನ್ನಿನಲ್ಲಿ ನೀಡಿದರು. ಈ ಉಪನ್ಯಾಸವನ್ನು ಸ್ವಾಮೀಜಿಯವರು ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ, ನಾರದ ಋಷಿಯು ಸನತ್ಕುಮಾರ ಮಹರ್ಷಿಯ ಬಳಿಗೆ ಹೋಗಿ ಅನೇಕ ಪ್ರಶ್ನೆಗಳನ್ನು ಕೇಳುವ ಒಂದು ಪ್ರಸಂಗದಿಂದ ಆರಂಭಿಸುತ್ತಾರೆ. ಹಾಗೆಯೇ ಅದೇ ಉಪನಿಷತ್ತಿನಲ್ಲಿ ಬರುವ ಶ್ವೇತಕೇತುವಿನ ವೃತ್ತಾಂತವನ್ನೂ ಸ್ವಾಮೀಜಿ ಸಭಿಕರಿಗೆ ಹೇಳುತ್ತಾರೆ.

ಈ ಎರಡೂ ಕಥೆಗಳಲ್ಲಿ ಬರುವ ವಿಚಾರ ಇದು: **ವಿಶೇಷದಿಂದ ಸಾಮಾನ್ಯದ ಕಡೆಗೆ ಹೋಗುವುದು. ಇದು ಜ್ಞಾನವನ್ನು ತಿಳಿದುಕೊಳ್ಳುವ ಮೊದಲನೆಯ ನಿಯಮ.** ಅಂದರೆ, ವಿಶೇಷವಾದುದನ್ನು ಸಾಧಾರಣವಾದುದಕ್ಕೆ ಹೋಲಿಸಿ, ಅನಂತರ ಸರ್ವಸಾಧಾರಣವಾದುದಕ್ಕೆ ಹೋಲಿಸುವುದರ ಮೂಲಕ ಅರಿತುಕೊಳ್ಳುವುದು. ಸನತ್ಕುಮಾರನು ತನ್ನ ಉಪದೇಶದಲ್ಲಿ ಈ ನಿಯಮವನ್ನು ಪಾಲಿಸುತ್ತಾನೆ. ಸೂರ್ಯ, ಚಂದ್ರ, ನಕ್ಷತ್ರಾವಳಿ, ಮಿಂಚು– ಇವೆಲ್ಲ ಆಕಾಶದಲ್ಲಿ ಇವೆ. ಹೀಗೆ ಆಕಾಶವು ಸಾಧಾರಣ ತತ್ತ್ವವಾಗುತ್ತದೆ. ಅದಕ್ಕಿಂತ ಮೇಲಾದುದು 'ಪ್ರಾಣ' ಎಂದು ಸನತ್ಕುಮಾರನು ಹೇಳುತ್ತಾನೆ. ಇದು ಆಕಾಶಕ್ಕಿಂತ ಮಿಗಿಲಾದುದು. ಇದು ಸರ್ವಸಾಧಾರಣ ತತ್ತ್ವ. ಶ್ವೇತಕೇತುವಿನ ತಂದೆಯೂ ಕೂಡ ಅವನಿಗೆ ಇದೇ ರೀತಿಯ ಉಪದೇಶವನ್ನು ಮಾಡಿದನು. ಸ್ಥೂಲದಿಂದ ಸೂಕ್ಷ್ಮದವರೆಗೆ ಅವನನ್ನು ಕರೆದುಕೊಂಡು ಹೋದನು. ಕಡೆಗೆ ಈ ರೀತಿ ಬೋಧಿಸಿದನು: "ಅತ್ಯಂತ ಸೂಕ್ಷ್ಮವಾದ ಸಾರವು ಯಾವುದಿದೆಯೋ ಪ್ರತಿಯೊಂದು ವಸ್ತುವಿನ 'ಆತ್ಮ'ವೂ ಅದೇ ಆಗಿರುವುದು. ಅದೇ ಸತ್ಯ, ಅದೇ ಆತ್ಮ. ಓ ಶ್ವೇತಕೇತು, ನೀನೇ ಅದಾಗಿದ್ದೀಯೆ." ಇಲ್ಲಿ 'ಆತ್ಮ'ವೇ ಸರ್ವಸಾಧಾರಣ ವಸ್ತು ಎಂದು ಉಪದೇಶಿಸಲ್ಪಟ್ಟಿದೆ.

**ಜ್ಞಾನದ ಎರಡನೆಯ ನಿಯಮವೆಂದರೆ, ವಿವರಣೆಯು ಯಾವ ವಸ್ತುವಿಗೆ ಬೇಕೋ, ಅದನ್ನು ಸಾಧ್ಯವಾದ ಮಟ್ಟಿಗೆ ಆ ವಸ್ತುವಿನ ಸ್ವಭಾವದ ಮೂಲಕವೇ ವಿವರಿಸುವುದು.** ಮೇಲಿನ ಎರಡು ಬೋಧನೆಗಳಲ್ಲಿ ಈ ನಿಯಮವನ್ನು ಕೂಡ ಕಾಣಬಹುದು. ಅದರ ಪ್ರಕಾರ ಸೂಕ್ಷ್ಮತರವಾದ ಹಾಗೂ ಸರ್ವಸಾಮಾನ್ಯವಾದ 'ಪ್ರಾಣ' ಅಥವಾ 'ಆತ್ಮ'ವೇ ಎಲ್ಲದರ ಅಂತರಾಳದಲ್ಲಿಯೂ ಇರುತ್ತದೆ. ಅದೇ ಮೂರ್ತರೂಪವನ್ನು ಪಡೆದುಕೊಂಡು, ಆಕಾಶ ಮುಂತಾದ ವಸ್ತುಗಳಾಗಿ ಪರಿಣಮಿಸುತ್ತದೆ. ಹೀಗೆ ಜ್ಞಾನವನ್ನು ನಾವು ಬಾಹ್ಯ ಕಾರಣಗಳಿಂದ ತಿಳಿದುಕೊಳ್ಳದೆ, ವಸ್ತುವಿನ ಸ್ವಭಾವದ ಮೂಲಕವೇ ತಿಳಿದುಕೊಳ್ಳುತ್ತೇವೆ. ಹೀಗೆ ಮೇಲಿನ ಎರಡು ನಿಯಮಗಳ ಮೂಲಕ ಜಿಜ್ಞಾಸೆ ಮಾಡುವುದೇ ಉಪನಿಷತ್ತುಗಳಲ್ಲಿ ಕಂಡುಬರುವ ವೈಜ್ಞಾನಿಕ ವಿಧಾನ.

ನಾವು ಪೂಜೆ ಮಾಡುವ ದೇವರ ಹಲವಾರು ಸಗುಣ ರೂಪಗಳನ್ನು ಕೂಡ ಇದೇ ರೀತಿ ಸಾಮಾನ್ಯೀಕರಿಸಬೇಕು. ಸಗುಣ ದೇವರು ಸೃಷ್ಟಿಗೆ ಕಾರಣ; ಅವನು ಪ್ರಕೃತಿಯ ಹೊರಗೆ ಇದ್ದು, ಜಗತ್ತನ್ನು ಶೂನ್ಯದಿಂದ ಸೃಷ್ಟಿಸಿದ್ದಾನೆ ಎನ್ನುವ ದ್ವೈತವಾದಿಗಳ ಅಭಿಪ್ರಾಯವು ಅತ್ಯಂತ ಅವೈಜ್ಞಾನಿಕವಾದ ಸಿದ್ಧಾಂತ ಎನ್ನುತ್ತಾರೆ ಸ್ವಾಮೀಜಿ. ಏಕೆಂದರೆ ಈ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಎರಡು ವೈಜ್ಞಾನಿಕ ನಿಯಮಗಳ ಪಾಲನೆಯಾಗಿಲ್ಲ. ಆದ್ದರಿಂದ ಸಗುಣ ದೇವರಿಗಿಂತಲೂ ಹೆಚ್ಚಿನ ಸಾಮಾನ್ಯೀಕರಣವನ್ನು ನಾವು ಅನ್ವೇಷಿಸಬೇಕಾಗುತ್ತದೆ. ಇದನ್ನೇ ವೇದಾಂತ ಕೈಗೊಳ್ಳುವುದು. ಈ ಅನ್ವೇಷಣೆಯಿಂದ ವೇದಾಂತವು ತಿಳಿದುಕೊಂಡ ಸಂಗತಿಯೆಂದರೆ, ಇರುವುದು ಒಂದು ಮಾತ್ರ; ಅದೇ ಸತ್ಯ; ಅದು ವ್ಯಕ್ತವಾಗಿರಬಹುದು ಅಥವಾ ಅವ್ಯಕ್ತವಾಗಿರಬಹುದು. ನಾವು ದೇಹ, ಮನಸ್ಸು, ಆತ್ಮ – ಹೀಗೆ ಹಲವಾರು ತತ್ತ್ವಗಳಿವೆ ಎಂದುಕೊಳ್ಳುತ್ತೇವೆ. ಆದರೆ ನಿಜವಾಗಿ ಇರುವುದು ಒಂದೇ. ನಮ್ಮ ಸುತ್ತಲೂ ವ್ಯಕ್ತವಾಗಿರುವುದನ್ನೇ ನಾವು ಯಾವಾಗ ನೋಡುತ್ತೇವೆಯೋ, ಆಗ ಅವ್ಯಕ್ತ ನಮ್ಮ ಪಾಲಿಗೆ

ಮಾಯವಾದಂತೆ ತೋರುವುದು. ಯಾವಾಗ ಅವ್ಯಕ್ತವಾದುದನ್ನು ನೋಡುವ ಸಾಮರ್ಥ್ಯ ನಮಗೆ ಬರುತ್ತದೆಯೋ, ಆಗ (ಈಗ ಕಾಣಿಸುತ್ತಿರುವ) ವ್ಯಕ್ತವಾದ ವಸ್ತುಗಳು ನಾಶವಾಗುವವು. ವಸ್ತುಸತ್ತಾವಾದಿಯು (Realist) ವ್ಯಕ್ತವನ್ನು ಮಾತ್ರ ನೋಡುವನು. ನಿಜವಾದ ಭಾವಸತ್ತಾವಾದಿಯು (Idealist) ವಿಕಾರಗಳನ್ನು ಮೀರಬಲ್ಲ ಗ್ರಹಣಶಕ್ತಿಯನ್ನು ಬೆಳೆಸಿಕೊಳ್ಳುವನು. ಅವನು ಈ ವಿಕಾರವಾದ, ವ್ಯಕ್ತವಾದ ಪ್ರಪಂಚವು ಬರಿಯ ಭ್ರಮೆ, ನಿಜವಾಗಿಯೂ ಇರುವುದು ಒಂದೇ ಎಂದು ಅಧಿಕಾರವಾಣಿಯಿಂದ ಹೇಳುತ್ತಾನೆ. ವಸ್ತುಸತ್ತಾವಾದಿಯು ಪರಿವರ್ತನಶೀಲವಾದುದನ್ನು ಮಾತ್ರ ನೋಡುತ್ತಾನೆ. ಆದರೆ ಭಾವಸತ್ತಾವಾದಿಯು ಅವಿಕಾರಿಯಾದುದನ್ನು ಮಾತ್ರ ಸತ್ಯವೆಂದು ಒಪ್ಪಿಕೊಳ್ಳುತ್ತಾನೆ. ಆದರೆ ವೇದಾಂತವು ಭಾವಸತ್ತಾವಾದವೂ ಅಲ್ಲ, ವಸ್ತುಸತ್ತಾವಾದವೂ ಅಲ್ಲ. ಇರುವ ಒಂದೇ ಸತ್ಯವು ಹಲವಾರು ಬಗೆಗಳಲ್ಲಿ ಪ್ರಕಟಗೊಳ್ಳುತ್ತದೆ ಎಂದು ಅದು ಹೇಳುತ್ತದೆ. ಅವಿಕಾರವಾಗಲಿ, ವಿಕಾರವಾಗಲಿ ಅವುಗಳ ಹಿನ್ನೆಲೆಯಲ್ಲಿ ಇರುವುದು ಒಂದೇ ನಿತ್ಯಸತ್ಯ ಎನ್ನುವುದು ವೇದಾಂತದ ಸಿದ್ಧಾಂತ.

ಈಗಾಗಲೇ ನೋಡಿದಂತೆ, ಸಗುಣದೇವರ ಸಾಮಾನ್ಯೀಕರಣವು ವೈಜ್ಞಾನಿಕವಾದುದಲ್ಲ. ಇದಕ್ಕಿಂತ ಮೇಲಿರುವ ನಿರ್ಗುಣ ಬ್ರಹ್ಮಕ್ಕೆ ಹೋಗಬೇಕು. ಇದರಿಂದ ಸಗುಣದೇವರ ಭಾವನೆ ನಾಶವಾಗುತ್ತದೆ ಎಂದೇನೂ ಅಲ್ಲ. ಸಗುಣದೇವರನ್ನು ವಿವರಿಸಬೇಕಾದರೆ ನಾವು ನಿರ್ಗುಣಕ್ಕೆ ಹೋಗಲೇಬೇಕು. ಏಕೆಂದರೆ, ನಿರ್ಗುಣವು ಸಗುಣಕ್ಕಿಂತ ಉನ್ನತ ಮಟ್ಟದ ಸಾಮಾನ್ಯೀಕರಣ. ನಿರ್ಗುಣವೊಂದೇ ಅನಂತವಾಗಬಲ್ಲುದು. ಸಗುಣದೇವರು ಅಂತ್ಯವುಳ್ಳದ್ದು. ಈ ರೀತಿಯ ಸಾಮಾನ್ಯೀಕರಣದಿಂದ ನಾವು ಸಗುಣವನ್ನೇನೂ ನಾಶಮಾಡುವುದಿಲ್ಲ, ಅದನ್ನೂ ಉಳಿಸಿಕೊಳ್ಳುತ್ತೇವೆ, ನಾಶಮಾಡುವುದಿಲ್ಲ. ಸ್ವಾರಸ್ಯವೆಂದರೆ, ನಿರ್ಗುಣದೇವರ ಭಾವನೆಗೆ ಬಂದರೆ, ಸಗುಣ ದೇವರಿಗೆ ಅಲ್ಲಿ ಅವಕಾಶವಿಲ್ಲ ಎಂಬ ಅಪನಂಬಿಕೆ ಇದೆ. ಅದು ಸರಿಯಲ್ಲ. ನಿರ್ಗುಣದ ಭಾವನೆಯೇ ಸಗುಣ ದೇವರ ಭಾವನೆಗೆ ಆಧಾರವಾಗಿದೆ. ಮಾನವನ ಭಿನ್ನತೆಯ ಭಾವವನ್ನು, ಅಂದರೆ ಪ್ರತ್ಯೇಕ ವ್ಯಕ್ತಿತ್ವದ ಭಾವವನ್ನು ನಿರ್ಗುಣ ಭಾವನೆಯು ನಾಶಮಾಡುತ್ತದೆ ಎಂಬ ತಪ್ಪು ಕಲ್ಪನೆ ಇದೆ. ಆದರೆ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವುದೇ ಹೊರತು ನಾಶಮಾಡುವುದು ವೇದಾಂತದ ಗುರಿಯಲ್ಲ. ಯಾವುದೇ ವಸ್ತುವಿನ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಸರ್ವವ್ಯಾಪಿಯಾದ ವಸ್ತುವಿನೊಡನೆ ಹೋಲಿಸದೆ ಇದ್ದರೆ, ಆ ವ್ಯಕ್ತಿತ್ವದ ಅಸ್ತಿತ್ವವನ್ನು ಸಮರ್ಥಿಸುವುದಕ್ಕೇ ಆಗುವುದಿಲ್ಲ. ಪ್ರಪಂಚದಲ್ಲಿರುವ ಬೇರೆ ವಸ್ತುಗಳಿಗಿಂತ ತಾನು ಪ್ರತ್ಯೇಕವೆಂದು ಒಬ್ಬ ವ್ಯಕ್ತಿಯು ಭಾವಿಸಿದರೆ, ಆತನು ಒಂದು ನಿಮಿಷ ಕೂಡ ಆ ಸ್ಥಿತಿಯಲ್ಲಿ ಇರಲಾರನು. ಅಂತಹ ಸ್ಥಿತಿ ಹಿಂದೆಂದೂ ಇರಲಿಲ್ಲ, ಮುಂದೆ ಇರುವುದೂ ಇಲ್ಲ.

ವೈಜ್ಞಾನಿಕ ವಿಧಾನದ ಎರಡನೆಯ ನಿಯಮವು ವಸ್ತುವೊಂದರ ವಿವರಣೆಯು ಆ ವಸ್ತುವಿನ ಸ್ವಭಾವದಿಂದಲೇ ಬರಬೇಕು ಎನ್ನುವುದು. ಇದನ್ನು ನಾವೀಗಾಗಲೆ ತಿಳಿದಿದ್ದೇವೆ. ಇದನ್ನು ದೇವರ ಕಲ್ಪನೆಯ ವಿಷಯದಲ್ಲಿ ಅನ್ವಯಿಸಿದಾಗ, ಮತ್ತೂ ಗಹನವಾದ ತತ್ತ್ವಭಾಗಕ್ಕೆ ನಾವು ಎದುರಾಗುತ್ತೇವೆ. ಅದೇನೆಂದರೆ, ಆ ನಿರಾಕಾರ ಸತ್ಯ, ನಮ್ಮ ಅತ್ಯುತ್ತಮವಾದ ಸರ್ವಮಾನ್ಯತೆ ಎನ್ನುವುದು, ಬೇರೆಲ್ಲಿಯೂ ಇಲ್ಲ, ನಮ್ಮಲ್ಲಿಯೇ ಇರುವುದು, ನಾವೇ ಅದಾಗಿದ್ದೇವೆ ಎನ್ನುವುದು. ಹಾಗೆಂದೇ ಛಾಂದೋಗ್ಯ ಉಪನಿಷತ್ತು ಹೀಗೆ ಹೇಳುವುದು: "ಓ ಶ್ವೇತಕೇತು, ನೀನೇ ಅದು" ಎಂದು. ಸ್ವಾಮಿ ವಿವೇಕಾನಂದರು ಈ ಮಹಾವಾಕ್ಯಕ್ಕೆ ಹೀಗೆ ಸುಂದರವಾದ ವ್ಯಾಖ್ಯಾನವನ್ನು ಕೊಡುತ್ತಾರೆ: "ನೀನೇ ಆ ನಿರಾಕಾರವಾದ ಸತ್ಯ. ಯಾವ ದೇವರಿಗೋಸ್ಕರ ನೀನು ಪ್ರಪಂಚದಲ್ಲಿ ಹುಡುಕುತ್ತಿದ್ದೆಯೋ, ಅದೇ ಯಾವಾಗಲೂ ನೀನಾಗಿರುವೆ." 'ನೀನು' ಎಂದರೆ ವ್ಯಕ್ತಿದೃಷ್ಟಿಯಿಂದ ಅಲ್ಲ, ವ್ಯಕ್ತಿತ್ವಭಾವರಹಿತ ದೃಷ್ಟಿಯಿಂದ. ನಾವು ಈಗ ನೋಡುತ್ತಿರುವ ವ್ಯಕ್ತ ಮಾನವನು ವ್ಯಕ್ತೀಕರಣಗೊಂಡವನು. ಆದರೆ ಸತ್ಯವೇನೆಂದರೆ, ಅವನು ನಿಜವಾಗಲೂ ವ್ಯಕ್ತಿತ್ವರಹಿತನಾದವನು. ನಾವು ವ್ಯಕ್ತಿತ್ವವನ್ನು ತಿಳಿದುಕೊಳ್ಳಬೇಕಾದರೆ ಅದನ್ನು ವ್ಯಕ್ತಿತ್ವಭಾವರಹಿತವಾದ ಇನ್ನೊಂದರೊಂದಿಗೆ ಹೋಲಿಸಿಕೊಳ್ಳಬೇಕು, ಅಂದರೆ ವಿಶೇಷವಾದುದನ್ನು ಸರ್ವಸಾಮಾನ್ಯಕ್ಕೆ ಹೋಲಿಸಿಕೊಳ್ಳಬೇಕು. ಸರ್ವಸಾಮಾನ್ಯವಾದ ಆ ಅವ್ಯಕ್ತವೇ ಸತ್ಯವಾದುದು. ಅದೇ ಮಾನವನ ಆತ್ಮ.

ಭಾರತೀಯ ಸಂಪ್ರದಾಯದಲ್ಲಿ ವೇದಪ್ರಾಮಾಣ್ಯಕ್ಕೆ ಬಹಳ ಮಹತ್ವವನ್ನು ಕೊಡುತ್ತಾರೆ. ಸಾವಿರಾರು ವರುಷಗಳಿಂದಲೂ ಅಸಂಖ್ಯಾತ ಪ್ರತಿಭಾವಂತರು ತತ್ತ್ವದ ನಿರ್ಣಯಕ್ಕಾಗಿ ತಮ್ಮ ಜೀವನವನ್ನು ಅರ್ಪಿಸಿದ್ದಾರೆ. ಅದಕ್ಕೆ ವೇದದ ಪ್ರಾಮಾಣ್ಯ ಇದೆ ಎಂದು ಹೇಳುತ್ತಾರೆ. ಹೀಗೆ ಎಲ್ಲ ತರದ ಸಾಪೇಕ್ಷ ಸತ್ಯದ ವಿಷಯದಲ್ಲಿಯೂ ಕೂಡ, ಸತ್ಯಕ್ಕಿಂತ ಹೆಚ್ಚಾಗಿ ನಮಗೆ ಬೇಕಾಗಿರುವುದು ಅನುಷ್ಠಾನ. ಅದೇ ನಮ್ಮ ಜೀವನವಾಗಬೇಕು. ಅದ್ವೈತ ಸಿದ್ಧಾಂತಕ್ಕೆ ಈ ಬಗೆಯ ಅನುಷ್ಠಾನಪ್ರದ ಗುಣವಿದೆ. ಅದು ಅಸಂಪೂರ್ಣವಾದ ದೇವರ ಭಾವಗಳೆಲ್ಲವನ್ನೂ ಮಾನವನಿಗೆ ಉಪಕಾರಿ ಎಂದು ಬಗೆದು, ಅವೆಲ್ಲವನ್ನೂ ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ಸಗುಣ ದೇವರ ಕಲ್ಪನೆ ಅತಾರ್ಕಿಕವೆಂದು ತೋರಿದರೂ, ಅದು ಸಾಮಾನ್ಯ ಜನರಿಗೆ ಸಮಾಧಾನವನ್ನು ಕೊಡುವ ಭಾವನೆ. ಅಂತಹ ಧರ್ಮ ನಮಗೆ ಅವಶ್ಯಕ. ಹಾಗೆಯೇ ವಿಚಾರವಂತರಿಗೆ ನಿರ್ಗುಣ ಭಾವನೆಯೂ ಅವಶ್ಯಕ. ಅದ್ವೈತದಲ್ಲಿ ಈ ಎರಡೂ ಭಾವನೆಗಳಿಗೆ ಸಮಾನ ಅವಕಾಶವಿದೆ ಎಂಬುದೇ ಅದರ ವೈಶಿಷ್ಟ್ಯ. ಸ್ವಾಮೀಜಿ ಹೇಳುತ್ತಾರೆ, ಮಾನವ ಬುದ್ಧಿಯ ಮೂಲಕ ಸಿಕ್ಕುವ ನಿರ್ಗುಣ ಸತ್ಯದ ಅತ್ಯುತ್ತಮ ಪ್ರತಿಬಿಂಬವೇ ಸಗುಣ. ನಾವು ನೋಡುವ, ಆಲೋಚಿಸುವ ಮತ್ತು ಅನುಭವಿಸುವ ಎಲ್ಲವೂ, ಸಾಕಾರ ದೇವರು ಕೂಡ, ಸಾಂತ ಅಭಿವ್ಯಕ್ತಿಯೇ ಆಗಿದೆ. ಕಾರ್ಯಕಾರಣ ಸಂಬಂಧದ ಭಾವವಿರುವುದೇ ಈ ವ್ಯಕ್ತಜಗತ್ತಿನಲ್ಲಿ. ಹೀಗಾಗಿ ಸೃಷ್ಟಿಕರ್ತನಾದ ದೇವರನ್ನು ಕೂಡ ನಾವು ಸಹಜವಾಗಿಯೇ ಸಾಂತವೆಂದು ಆಲೋಚಿಸಬೇಕಾಗುತ್ತದೆ. ಆದರೆ ಸ್ವಾಮೀಜಿ ಎಚ್ಚರಿಸುತ್ತಾರೆ,

'ಈ ಬಗೆಯ ದೇವರು ಕೂಡ ನಿರಾಕಾರವಾದ, ಅನಂತವಾದ ಬ್ರಹ್ಮವೇ' ಎಂದು. ಈ ಜಗತ್ತು ಕೂಡ ನಮ್ಮ ಬುದ್ಧಿಯಿಂದ ಗ್ರಹಿಸಲ್ಪಡುವ ನಿರ್ಗುಣಬ್ರಹ್ಮವೇ ಆಗಿದೆ. ಪ್ರಪಂಚದಲ್ಲಿ ಯಾವುದು ಸತ್ಯವೋ ಅದೆಲ್ಲವೂ ನಿರಾಕಾರ ಬ್ರಹ್ಮವೇ. ಈ ಬ್ರಹ್ಮವನ್ನು ಯಾವುದರೊಂದಿಗೂ ಹೋಲಿಸಲಾಗದು. ಹೀಗಾಗಿ ಬ್ರಹ್ಮವು ಪೂರ್ಣವಾದುದು. ಆದರೆ ಅದರ ಅಂತರಾಳದಲ್ಲಿ ಪ್ರತಿಯೊಂದು ಕಣವೂ ಕೂಡ ನಿರಂತರ ಪ್ರವಾಹದಲ್ಲಿರುವುದು, ಬದಲಾವಣೆಗೊಳ್ಳುತ್ತಿರುವುದು. ಹೀಗಾಗಿ ಬ್ರಹ್ಮವು ಏಕಕಾಲದಲ್ಲಿ ವಿಕಾರಿಯಾದುದು ಮತ್ತು ಅವಿಕಾರಿಯಾದುದು. 'ತತ್ತ್ವಮಸಿ' ಎಂಬ ವಾಕ್ಯದ ಅರ್ಥವೇ ಇದು: ನಿರಾಕಾರವು ಸಾಕಾರವನ್ನು ನಿರಾಕರಿಸುವ ಬದಲು ಅದನ್ನು ವಿವರಿಸುತ್ತದೆ; ನಿರಪೇಕ್ಷವು ಸಾಪೇಕ್ಷವನ್ನು ಕೆಳಕ್ಕೆ ಇಳಿಸುವುದರ ಬದಲು, ಅದನ್ನು ನಮ್ಮ ಬುದ್ಧಿ ಭಾವಗಳಿಗೆ ಸಮಂಜಸವಾಗಿ ತೃಪ್ತಿಯಾಗುವಂತೆ ವಿವರಿಸುತ್ತದೆ.

ಸಾಂತ ವ್ಯಕ್ತಿಯೊಬ್ಬನು ತಾನು ಎಲ್ಲಿಂದ ಬಂದೆ ಎಂಬುದನ್ನು ಮರೆತು, ತಾನು ಸಂಪೂರ್ಣವಾಗಿ ಪ್ರತ್ಯೇಕಗೊಂಡವನು ಎಂದೇ ತಿಳಿಯುತ್ತಾನೆ. ಇದೇ ಅವಿದ್ಯೆ ಅಥವಾ ದ್ವೈತಭಾವನೆ. ನಮ್ಮಲ್ಲಿರುವ ಸಚ್ಚಿದಾನಂದವು ಅನಂತವಾಗದೆ ಇರದು. ಅನಂತ ಶಕ್ತಿ, ಅನಂತ ಅಸ್ತಿತ್ವ, ಅನಂತ ಆನಂದಗಳು ನಮ್ಮದಾಗಿವೆ. ಅದನ್ನು ನಾವು ಹೊರಗಿನಿಂದ ಗಳಿಸಬೇಕಾಗಿಲ್ಲ. ಅವು ನಮ್ಮಲ್ಲೇ ಇರುವಂಥವು; ನಮ್ಮ ಸ್ವಂತದವು. ಅವನ್ನು ನಾವು ಪ್ರಕಾಶಪಡಿಸಬೇಕಷ್ಟೆ. ಅದ್ವೈತದ ಮುಖ್ಯ ಭಾವನೆಯೇ ಇದು: ಎಲ್ಲ ಜ್ಞಾನವೂ ನಮ್ಮಲ್ಲೇ ಇದೆ. ಜ್ಞಾನವು ಜಡವಸ್ತುವಿನಲ್ಲಿ ಇರಲು ಸಾಧ್ಯವಿಲ್ಲ. ಸದಾಕಾಲದಲ್ಲಿಯೂ ಅದು ಮಾನವನಲ್ಲೇ ಇದ್ದಿತು. ಯಾರೂ ಎಂದಿಗೂ ಜ್ಞಾನವನ್ನು ಸೃಷ್ಟಿಸಲಿಲ್ಲ. ಮಾನವನು ತನ್ನ ಅಂತರಂಗದಿಂದಲೇ ಅದನ್ನು ಹೊರತರುವನು. ಅದು ಒಳಗಡೆಯೇ ಇರುವುದು. ಮಾನವನಲ್ಲಿ ಅನಂತಶಕ್ತಿ ಸುಪ್ತರೂಪದಲ್ಲಿ ಅಡಗಿದೆ. ಅದರ ಅರಿವು ಅವನಿಗೆ ಗೊತ್ತಾದಾಗ ಅದು ಜಾಗೃತವಾಗುವುದು.

ಈ ಪ್ರವಚನದ ಕಡೆಯಲ್ಲಿ ಸ್ವಾಮೀಜಿ ಹೀಗೆ ಕರೆ ನೀಡುತ್ತಾರೆ: "ನಿಧಾನವಾಗಿ ಆ ಅನಂತ ಮಹಾಮಹಿಮನು ಸುಜಾಗೃತನಾಗಿ, ತನ್ನ ಶಕ್ತಿಯ ಪರಿಚಯವನ್ನು ಹೊಂದಿ ಮೇಲೇಳುವಂತೆ ಕಾಣುತ್ತಿರುವನು. ಅವನ ಪ್ರಜ್ಞೆ ವಿಶಾಲವಾಗುತ್ತ ಆಗುತ್ತ, ಅವನ ಬಂಧನಗಳು ಹೆಚ್ಚು ಹೆಚ್ಚು ಸಡಿಲವಾಗುತ್ತವೆ, ಸರಪಳಿಗಳು ಮುರಿಯುತ್ತವೆ. ತನ್ನ ಅನಂತಶಕ್ತಿಯ, ಅನಂತ ಜ್ಞಾನದ ಸಂಪೂರ್ಣ ಪರಿಚಯ ಅವನಿಗೆ ಉಂಟಾಗಿ ತನ್ನ ಕಾಲ ಮೇಲೆ ಧೈರ್ಯದಿಂದ ನಿಲ್ಲುವ ದಿನ ನಿಜವಾಗಿಯೂ ಬರುತ್ತದೆ. ಅಂತಹ ಪವಿತ್ರವಾದ ಗುರಿಯೆಡೆಗೆ ಎಲ್ಲರೂ ಬೇಗ ಹೋಗಲು ನಾವುಗಳೆಲ್ಲರೂ ಸಹಾಯ ಮಾಡೋಣ."

ಸ್ವಾಮೀಜಿ ತಮ್ಮ ಅನುಷ್ಠಾನವೇದಾಂತದ ಸರಣಿಯಲ್ಲಿನ ಕಟ್ಟಕಡೆಯ ಪ್ರವಚನವನ್ನು ಲಂಡನ್ನಿನಲ್ಲಿಯೇ, ೧೮೯೬ನೇ ಇಸವಿಯ ನವೆಂಬರ್ ೧೮ರಂದು ನೀಡಿದರು. ಮೊದಲಿಗೆ ಅವರು ವ್ಯಷ್ಟಿ ಮತ್ತು ಸಮಷ್ಟಿಯ ವಿಚಾರವನ್ನು ತೆಗೆದುಕೊಳ್ಳುತ್ತಾರೆ; ವೇದಾಂತದ ರೀತಿಯಾಗಿ ಇವೆರಡಕ್ಕೂ ಇರುವ ಸಂಬಂಧವನ್ನು ಸಭಿಕರ ಮುಂದಿಡುತ್ತಾರೆ. ದ್ವೈತ ಸಿದ್ಧಾಂತದ ಪ್ರಕಾರ ಪ್ರತಿಯೊಬ್ಬ ಜೀವಿಗೂ ಸ್ಪಷ್ಟ ಲಕ್ಷಣಗಳುಳ್ಳ, ಮಿತವಾದ, ಪ್ರತ್ಯೇಕವಾದ ಒಂದು ಆತ್ಮವಿದೆ. ಬೌದ್ಧರು ಈ ವಾದವನ್ನು ನಿರಾಕರಿಸುತ್ತಾರೆ. ಅವಿಕಾರಿಯಾದ ಒಂದು ವಸ್ತುವನ್ನು ಊಹಿಸುವುದೇ ನಿಷ್ಪ್ರಯೋಜಕ ಎಂದು ಅವರು ವಾದಿಸುತ್ತಾರೆ. ಒಂದು ವೇಳೆ ಅಂತಹ ವಸ್ತು ಇದ್ದರೂ ಅದನ್ನು ಗ್ರಹಿಸುವುದಕ್ಕೆ ನಮಗೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಯೂರೋಪಿನಲ್ಲಿಯೂ ಇಂತಹ ಒಂದು ಚರ್ಚೆ ಸ್ವಾಮೀಜಿಯವರ ಸಮಯದಲ್ಲಿ ನಡೆಯುತ್ತಿತ್ತು. ಅದರ ಒಂದು ಪಕ್ಷದವರು, ಬದಲಾಗುವ 'ಗುಣ'ಗಳ ಹಿಂದೆ, ಬದಲಾಯಿಸದ ಒಂದು 'ಗುಣಿ' ಇದೆ ಎನ್ನುತ್ತಿದ್ದರು. ಮತ್ತೊಂದು ಪಕ್ಷದವರು ಇಂತಹ ಊಹೆ ಅನಗತ್ಯ ಎನ್ನುತ್ತಿದ್ದರು. ಒಂದು ಪಕ್ಷದವರು ಅವಿಕಾರಿಯಾದ ವಸ್ತುವನ್ನು ಗ್ರಹಿಸದೆ ವಿಕಾರವನ್ನು ನಾವು ಗ್ರಹಿಸಲಾರೆವು ಎನ್ನುತ್ತಿದ್ದರು. ಮತ್ತೊಂದು ಪಕ್ಷದವರು ಇದು ಅನಗತ್ಯ ಎನ್ನುತ್ತಿದ್ದರು.

ಭರತಖಂಡದಲ್ಲಿಯೂ ಈ ಪ್ರಶ್ನೆಗೆ ಹಿಂದೆ ಉತ್ತರ ಸಿಕ್ಕಿರಲಿಲ್ಲ. ಏಕೆಂದರೆ ಗುಣಗಳ ಹಿಂದಿರುವ, ಗುಣಗಳಲ್ಲದ ಗುಣಿಯನ್ನು ಊಹಿಸುವುದು ಮತ್ತು ಅದನ್ನು ಸತ್ಯವೆಂದು ಸಾಧಿಸುವುದು ಅಸಾಧ್ಯ. ಉದಾಹರಣೆಗೆ, 'ನಾನು' ಎಂಬುದನ್ನು ಅವಿಕಾರಿ ಎಂದು ಸಾಧಿಸುವುದು ಬಹಳ ಕಷ್ಟ. ಏಕೆಂದರೆ ನಾನು ಮಾಡುವ ಕ್ರಿಯೆಗಳಿಂದ ಪ್ರತ್ಯೇಕವಾಗಿ, 'ನಾನು'ವನ್ನು ಪ್ರತ್ಯೇಕಿಸುವುದು ಅಸಾಧ್ಯ. 'ನಾನು' ಎನ್ನುವುದು ಯಾವಾಗಲೂ ಕ್ರಿಯೆಗಳು ಮತ್ತು ದೇಹದ ಪರಿವರ್ತನೆಗಳೆಂಬ ವಿಕಾರಗಳಲ್ಲಿ ತಾದಾತ್ಮ್ಯವನ್ನು ಹೊಂದಿಯೇ ಇರುತ್ತದೆ. ಹೀಗಾಗಿ ಗುಣಗಳಿಂದ ಪ್ರತ್ಯೇಕವಾದ ಪೂರ್ಣವಾದ ಆತ್ಮವೊಂದಿದೆ ಎನ್ನುವುದನ್ನು ಪ್ರಮಾಣೀಕರಿಸಲಾಗುವುದಿಲ್ಲ. ಈ ವಿಷಯದಲ್ಲಿ ಬೌದ್ಧರ ವಾದವು ಪ್ರಬಲವಾಗಿರುವಂತೆ ಮೇಲುನೋಟಕ್ಕೆ ತೋರುತ್ತದೆ.

ಒಂದು ಪಕ್ಷದವರು ಅವಿಕಾರವಾದ ವಸ್ತುವೊಂದು ಇದೆ, ಅದೇ ಸತ್ಯ ಎನ್ನುವರು. ಇನ್ನೊಂದು ಪಕ್ಷದವರು (ಬೌದ್ಧರು), ಅಂತಹ ಊಹೆ ಅನಗತ್ಯ ಎನ್ನುವರು. ಅದ್ವೈತಿಗಳ ಆತ್ಮ ಸಿದ್ಧಾಂತವು ಎರಡು ಪಕ್ಷಗಳಿಗೂ ರಾಜಿ ಮಾಡಿಸುತ್ತದೆ ಎಂದು ಸ್ವಾಮೀಜಿ ಅಭಿಪ್ರಾಯಪಡುತ್ತಾರೆ. ಈ ಸಿದ್ಧಾಂತದ ಪ್ರಕಾರ 'ವಿಕಾರ' ಮತ್ತು 'ಅವಿಕಾರ' – ಇವುಗಳೆರಡನ್ನೂ ಒಬ್ಬನೇ ಏಕಕಾಲದಲ್ಲಿ ಆಲೋಚಿಸಲು ಸಾಧ್ಯವಿಲ್ಲ. ಆದರೆ ಪಾರಮಾರ್ಥಿಕವಾಗಿ ನೋಡಿದಾಗ, ಯಾವುದು ಗುಣಿಯೋ ಅದೇ ಗುಣ. ಗುಣ ಮತ್ತು ಗುಣಿ – ಇವೆರಡೂ ವಿಭಿನ್ನವಾದ ಎರಡು ವಸ್ತುಗಳಲ್ಲ. ಯಾವುದು ಅವಿಕಾರವಾದುದೋ, ಅದೇ ವಿಕಾರವಾದಂತೆ ನಮಗೆ ತೋರುತ್ತಿರುವುದು. ಅವ್ಯಕ್ತವು ವ್ಯಕ್ತಕ್ಕಿಂತ ಬೇರೆಯಲ್ಲ, ಏಕೆಂದರೆ ಅವ್ಯಕ್ತವೇ ವ್ಯಕ್ತವಾಗಿ ತೋರುವುದು. ಅವಿಕಾರವಾದ ಆತ್ಮವೇ ನಮ್ಮ ಚಿಂತನೆ, ಭಾವನೆ ಮತ್ತು ದೇಹಗಳಾಗಿ ಕಾಣಿಸುತ್ತಿರುವುದು. ಒಂದೇ ಆತ್ಮವನ್ನು ದೇಹ,

ಮನಸ್ಸು, ಬುದ್ಧಿ, ಚಿಂತನೆ, ಭಾವನೆಗಳೆಂದು ಹೇಳುವ ಅಭ್ಯಾಸ ನಮಗೆ ಬಂದುಬಿಟ್ಟಿದೆ. ಆದರೆ ನಿಜವಾಗಿಯೂ ಇರುವುದು ಒಂದೇ ಒಂದು, ಅದೇ ಆತ್ಮ.

ನಿಜವಾಗಿಯೂ, ಆತ್ಮವೆಂಬ ಆ ಏಕವೇ ಅನಂತ ರೂಪ ಗಳಲ್ಲಿ ನಮಗೆ ಕಾಣಿಸುತ್ತಿರುವುದು. ಇದೇ ಕಾರ್ಯಕಾರಣ ಸಂಬಂಧಕ್ಕೆ ಮೂಲ. ಕೆಲವೊಮ್ಮೆ ಕಾರ್ಯ ಕಾಣಿಸುವುದು, ಮತ್ತೊಮ್ಮೆ ಕಾರಣ ಕಾಣಿಸುವುದು. ಅದೇ ರೀತಿ ಎಲ್ಲದಕ್ಕೂ ಕಾರಣವಾದ ಆತ್ಮದ ಅರಿವಾದಾಗ ಅಲ್ಲಿ ಕಾರ್ಯವಾದ ಜಗತ್ತು ಕಾಣಿಸುವುದಿಲ್ಲ. ಹಾಗೆಯೇ, ಕಾರ್ಯವಾದ ಜಗತ್ತು ಕಾಣಿಸು ವಲ್ಲಿ ಕಾರಣವಾದ ಆತ್ಮವು ಗೋಚರಿಸುವುದಿಲ್ಲ. ಈ ಸಿದ್ಧಾಂತವು ಬೌದ್ಧರ ಮತ್ತು ದ್ವೈತಿಗಳ ವಾದಗಳೆರಡನ್ನೂ ನಿರಾಕರಿಸುತ್ತದೆ ಅಥವಾ ಅವೆರಡಕ್ಕೂ ಹೊಂದಿಕೊಳ್ಳುವ ಸಮನ್ವಯ ತತ್ತ್ವವನ್ನು ಪ್ರತಿಪಾದಿಸುತ್ತದೆ. ಇದು ಸ್ವಾಮೀಜಿ ಯವರ ನಿಲುವು.

ನಾವು ಅಮರರಾಗಲು ಇಚ್ಛಿಸುತ್ತೇವೆ. ಆದರೆ ಅದೇ ಸಮಯದಲ್ಲಿ ಅಲ್ಪರಾಗಿಯೂ ಇರಲು ಬಯಸುತ್ತೇವೆ. ಪೂರ್ಣದ ಭಾಗಗಳಾಗಿರುವವರೆಗೆ ಎಂದಿಗೂ ಅಮರರಾಗಲು ಸಾಧ್ಯವೇ ಇಲ್ಲ ಎಂದು ಸ್ವಾಮೀಜಿ ಪ್ರತಿಪಾದಿಸುತ್ತಾರೆ. ನಾವು ಪೂರ್ಣರಾದಾಗ ಮಾತ್ರ ಅಮರರಾಗಲು ಸಾಧ್ಯ. ಅಂತಹ ಪೂರ್ಣತೆಯು ನಮ್ಮಲ್ಲಿಯೇ ಅಂತರ್ಗತವಾಗಿರುವುದು. ಅದನ್ನು ವಿಕಾಸ ಮಾಡಿಕೊಳ್ಳುವುದೇ ನಮ್ಮ ಮುಂದಿರುವ ಕಾರ್ಯ. ಈ ದೃಷ್ಟಿಯಲ್ಲಿ ಒಂದು ಬಸವನಹುಳುವೂ, ಮಾನವ ವ್ಯಕ್ತಿತ್ವವೂ ಒಂದೇ ಆಗಿದೆ. ಬಸವನಹುಳುವಿನಿಂದ ಹಿಡಿದು ಮಾನವನವರೆಗಿನ ವಿಕಾಸವು ಅನಂತತೆಯ ಕಡೆಗಿನ ನಿರಂತರ ವಿಕಾಸವೇ ಆಗಿದೆ. ಆದಕಾರಣ ಜೀವಾತ್ಮನನ್ನು ನಾವು, 'ಅನಂತತೆಯೆಡೆಗೆ ಅನವರತವಾಗಿ ವಿಕಾಸವಾಗುತ್ತಿರುವ ವ್ಯಕ್ತಿ' ಎಂದು ಕರೆಯಬಹುದು. ಅಂತಹ ವ್ಯಕ್ತಿಯು ಅನಂತವನ್ನು ಸೇರಿದಾಗ ಮಾತ್ರವೇ ತನ್ನ ಪೂರ್ಣ ವ್ಯಕ್ತಿತ್ವವನ್ನು ಪಡೆಯುತ್ತಾನೆ. ಅಲ್ಲಿಯವರೆಗೆ ಅವನು ವಿಕಾಸವಾಗುತ್ತಿರುವ ವ್ಯಕ್ತಿಯೇ ಆಗಿ ಉಳಿದುಬಿಡುತ್ತಾನೆ.

ಅದ್ವೈತ ಸಿದ್ಧಾಂತದ ಒಂದು ಅಪೂರ್ವವಾದ ಮುಖ್ಯ ಲಕ್ಷಣವೆಂದರೆ ಹಿಂದಿನ ಸಿದ್ಧಾಂತಗಳೆಲ್ಲವನ್ನೂ ಸಮನ್ವಯ ಮಾಡುವುದು. ಅದ್ವೈತವು ಪುರಾತನ ಸಿದ್ಧಾಂತಗಳೊಂದಿಗೆ ಸೌಹಾರ್ದದಿಂದ ಇರುವುದು. ಹಾಗೆಯೇ ತನಗಿಂತ ಹಿಂದೆ ಇದ್ದ ದ್ವೈತ ಮುಂತಾದ ಎಲ್ಲ ಸಿದ್ಧಾಂತಗಳನ್ನೂ ತುಂಬು ಮನಸ್ಸಿನಿಂದ ಸ್ವೀಕರಿಸುವುದು. ಅವೆಲ್ಲವೂ ಒಂದೇ ಸತ್ಯದ ಬೇರೆ ಬೇರೆ ಅಭಿವ್ಯಕ್ತಿಗಳೆಂದು ವೇದಾಂತವು ಪರಿಗಣಿಸುವುದು. ತಾನು ಯಾವ ನಿರ್ಣಯಕ್ಕೆ ಬಂದಿರುವನೋ, ಆ ನಿರ್ಣಯಕ್ಕೆ ಅವು ಕೂಡ ಮುಂದೆ ಬರುತ್ತವೆ ಎಂದು ಅದ್ವೈತವು ಒಪ್ಪಿಕೊಳ್ಳುವುದು. ಹೀಗಾಗಿ ವೇದಾಂತ, ಮಾನವ ಜನಾಂಗವು ಹತ್ತಿಹೋಗ ಬೇಕಾಗಿರುವ ಯಾವ ಮೆಟ್ಟಿಲುಗಳನ್ನೂ ನಿರಾಕರಿಸದೆ, ಆಶೀರ್ವದಿಸಿ ಕಾಪಾಡುವುದು. ಅದು ಯಾವ ದ್ವೈತ ಭಾವನೆ ಯನ್ನೂ ತಿರಸ್ಕರಿಸುವುದಿಲ್ಲ. ಯಾವುದನ್ನೂ ನಿರಾಕರಿಸದೆ, ಎಲ್ಲವೂ ವೇದಾಂತದ ಪರಿಧಿಯೊಳಗೆ ಬರುವಂತೆ ನಮ್ಮ ಹಿರಿಯರು ಮಾಡಿಟ್ಟಿರುವರು. ಇದೇ ವೇದಾಂತದ ವಿಶ್ವವ್ಯಾಪ ಕತೆಗೆ, ಸರ್ವವ್ಯಾಪಕತೆಗೆ ಕಾರಣವಾಗಿದೆ.

ಒಬ್ಬ ಜೀವಿಯು ಪಡೆದುಕೊಳ್ಳಬಹುದಾದ ಶಕ್ತಿ ಮತ್ತು ಏರಬಹುದಾದ ಸಾಧ್ಯತೆ ಈಗಾಗಲೇ ಅವನ ಆತ್ಮದಲ್ಲಿ ಸುಪ್ತ ವಾಗಿ ಅಡಗಿದೆ. ಸ್ವಾಮೀಜಿಯವರ ಪ್ರಕಾರ ಯಾವುದೂ ಹೊರಗಿನಿಂದ ಬರುವುದಿಲ್ಲ, ಎಲ್ಲವೂ ಆತ್ಮನಲ್ಲಿ ಈಗಾಗಲೇ ಅವ್ಯಕ್ತ ರೂಪದಲ್ಲಿ ಇರುತ್ತದೆ. ಇದನ್ನು ವ್ಯಕ್ತ ಮಾಡುವುದಕ್ಕಾಗಿಯೇ ನಮ್ಮ ಜೀವನದ ಕಾರ್ಯಗಳೆಲ್ಲವೂ ಇರುವುದು. ಇದರ ಪ್ರಕಾರ ದೇಹಾತೀತರಾಗುವುದೇ ನಮ್ಮ ಗುರಿಯಾಗಬೇಕು. ಈ ಆದರ್ಶವು ಸಾಂತವಾಗಿರಲಾರದು, ಅನಂತವಾಗಿರಲೇಬೇಕು. ಅನಂತಕ್ಕಿಂತ ಸ್ವಲ್ಪ ಕಡಮೆಯಾದರೂ ಆದರ್ಶಕ್ಕೆ ಕುಂದುಂಟಾ ಗುವುದು. ಹೀಗಾಗಿ ಆದರ್ಶವನ್ನು ಸಾಧಿಸಲು ನಾವು ಅನಂತದೆಡೆಗೆ ಸಾಗಲೇಬೇಕು. ಇದನ್ನೇ ಅದ್ವೈತ ವೇದಾಂತವು ಒತ್ತಿಹೇಳುವುದು. ಆದರೆ, ಈ ಅನಂತತೆಯನ್ನು ಹುಡುಕಿಕೊಂಡು ನಾವು ಎಲ್ಲಿಗೂ ಹೋಗಬೇಕಾದ್ದಿಲ್ಲ, ಅದು ಈಗಾಗಲೇ ನಮ್ಮಲ್ಲೇ ಇದೆ. ಅಮರತ್ವ ಮತ್ತು ಆನಂದವನ್ನು ನಾವು ಹೊಸ ದಾಗಿ ಗಳಿಸಬೇಕಾಗಿಲ್ಲ. ಮೂರು ಕಾಲದಲ್ಲಿಯೂ ಅದು ನಮ್ಮದೇ ಆಗಿರುವುದು. ಸ್ವಾಮೀಜಿ ಹೀಗೆ ಕರೆಕೊಡುತ್ತಾರೆ: "ನೀವು ಸ್ವತಂತ್ರರೆಂದು ದೃಢವಾಗಿ ಸಾಧಿಸಲು ಪ್ರಯತ್ನಪಟ್ಟರೆ, ಈ ಕ್ಷಣವೇ ನೀವು ಮುಕ್ತರಾಗುವಿರಿ. ನೀವು ಬದ್ಧರೆಂದು ಹೇಳಿಕೊಂಡರೆ ಈಗಾಗಲೇ ಬದ್ಧರಾಗಿರುವಿರಿ. ಇದನ್ನೇ ಅದ್ವೈತವು ಧೈರ್ಯದಿಂದ ಸಾರುವುದು."

ಅದ್ವೈತವು ಮಾನವ ಕಲ್ಯಾಣಕ್ಕೆ ಸಹಕಾರಿಯಾದುದು. ಪ್ರತಿಯೊಂದು ದೇಶದಲ್ಲೂ ಈ ಆದರ್ಶವುಳ್ಳ ಇನ್ನೂರು ಜನ ಸ್ತ್ರೀ ಪುರುಷರು ಸತ್ಯವಾಗಿ ಮಾನವ ಕಲ್ಯಾಣವನ್ನು ಕುರಿತು ಚಿಂತಿಸಿದರೆ ಸ್ವರ್ಣಯುಗವು ಐದೇ ದಿನದಲ್ಲಿ ಉಂಟಾಗುತ್ತಿತ್ತು. ಯಾರು ತಮ್ಮ ಅಲ್ಪ ವ್ಯಕ್ತಿತ್ವದ ಬಗ್ಗೆ ಸ್ವಲ್ಪವೂ ಗಮನ ಕೊಡುವುದಿಲ್ಲವೋ ಅವರೇ ಮಾನವ ಜನಾಂಗಕ್ಕೆ ಅತ್ಯಂತ ಶ್ರೇಷ್ಠ ಉಪಕಾರಿಗಳು. ಸ್ವಾಮೀಜಿ ಇಂತಹ ಮಹಾನ್ ವ್ಯಕ್ತಿಗಳು ನೂರಾರು ಸಂಖ್ಯೆಯಲ್ಲಿ ಹುಟ್ಟಿ ಬರಬೇಕೆಂದು ಆಶಿಸಿದ್ದರು. ಅವರು ಹೀಗೆ ಹೇಳುತ್ತಾರೆ: "ಒಂದು ಸಣ್ಣ ಪಶುವಿಗೆ ಉಪಕಾರ ಆಗುವ ಹಾಗಿದ್ದರೆ, ತಮ್ಮ ನೂರಾರು ಜನ್ಮಗಳನ್ನಾದರೂ ಅರ್ಪಿಸಬಲ್ಲವರಾಗಿದ್ದ, ಪ್ರಾಚೀನಕಾಲದ ಮಹಾಮಹಿಮರಾಗಿದ್ದ ಋಷಿಗಳಂತಹ ದೇವದೂತರನ್ನು, ಧಾರ್ಮಿಕ ವ್ಯಕ್ತಿಗಳನ್ನು ನಾನು ನೋಡಬಯಸುವೆನು." ಭಗವಾನ್ ಬುದ್ಧನು ಇಂತಹ ಒಬ್ಬ ಪರಿಪೂರ್ಣ ವ್ಯಕ್ತಿಯಾಗಿದ್ದನು ಎಂದು ಸ್ವಾಮೀಜಿ ಹೇಳುತ್ತಾರೆ. ಅವನು ಅಜ್ಞೇಯತಾವಾದಿಯಾಗಿದ್ದರೂ, ಯಾರಿಗೆ ಬೇಕಾದರೂ ತನ್ನ ಜೀವನವನ್ನು ಪೂರ್ಣವಾಗಿ ಧಾರೆಯೆರೆಯಲು ಸಿದ್ಧನಾಗಿದ್ದನು. ಹಾಗೆಂದೇ, ಸರ್ವರ ಹಿತಕ್ಕೋಸ್ಕರ ತಾನು ಬದುಕಿರುವವರೆಗೂ ದುಡಿದನು.

ಮನುಷ್ಯನು ಸ್ವಾರ್ಥಪರನಾದಷ್ಟೂ ಅಧರ್ಮಿಯಾಗುತ್ತಾನೆ. ಹಾಗೆಯೇ ಜನಾಂಗಗಳು ಕೂಡ. ತನ್ನ ಸುಖವೇ ಪರಮ